ಇಂದು ದಿನಾಂಕ: 10.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು:** ಪ್ರತಿವಾದಿ 1 ರಿಂದ 5 ರವರ ಪರ ಶ್ರೀ ಡಿ ಟಿ ಟಿ ವಕೀಲರಿಂದ:

ನನ್ನ ತಂದೆಯ ಹೆಸರು ಅಡಿವೆಪ್ಪ. ಅವರ ತಂದೆಯ ಹೆಸರು ಕರಿಯಪ್ಪ. ನನ್ನ ತಂದೆಯಾದ ಅಡಿವೆಪ್ಪನಿಗೆ 3 ಜನ ಮಕ್ಕಳು. ಅವರೆಂದರೆ ಪಕ್ಕೀರಪ್ಪ ಅಡಿವೆಪ್ಪ ದೊಡ್ಡಮನಿ, ಹನುಮಂತಪ್ಪ ಅಡಿವೆಪ್ಪ ದೊಡ್ಡಮನಿ, ಚಂದ್ರಪ್ಪ ಅಡಿವೆಪ್ಪ ದೊಡ್ಡಮನಿ. ಇಬ್ಬರು ಹೆಣ್ಣು ಮಕ್ಕಳು ಇದ್ದು ಅವರೆಂದರೆ ಗಂಗಮ್ಮ ಅಡಿವೆಪ್ಪ ದೊಡ್ಡಮನಿ, ಶಾಂತಮ್ಮ ಅಡಿವೆಪ್ಪ ದೊಡ್ಡಮನಿ. ಗಂಗಮ್ಮ ರವರಿಗೆ ಹಿರೇಕೆರೂರಗೆ ಮದುವೆ ಮಾಡಿಕೊಟ್ಟಿರುತ್ತೇವೆ. ಶಾಂತಮ್ಮ ರವರಿಗೆ ಹಾನಗಲ್ ತಾಲೂಕು ಕೆಲವರಕೊಪ್ಪ ಕ್ಕೆ ಮದುವೆ ಮಾಡಿಕೊಟ್ಟಿರುತ್ತೇವೆ. ಗಂಗಮ್ಮ ರವರು ಜೀವಂತವಾಗಿದ್ದಾರೆ ಎಂದರೆ ಸರಿ. ಅವರನ್ನು ಹಿರೇಕೆರೂರನಲ್ಲಿ ಪಾರ್ವತಮ್ಮ ಎಂದು ಕರೆಯುತ್ತಾರೆ ಎಂದರೆ ಸರಿ. ಶಾಂತಮ್ಮ ರವರು ತೀರಿಕೊಂಡಿರುತ್ತಾರೆ. ಅವರಿಗೆ ಇಬ್ಬರು ಮಕ್ಕಳು ಇರುತ್ತಾರೆ. ಅವರೆಂದರೆ ಮಂಜವ್ವ ಮತ್ತು ಕುಸುಮಾ ಆಗಿರುತ್ತಾರೆ. ಸದರಿ ಮಂಜವ್ವ ಮತ್ತು ಕುಸುಮಾರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಅವರನ್ನು ಪಕ್ಷಗಾರರನ್ನಾಗಿ ಮಾಡಲು ನಮಗೆ ಯಾವುದೇ ತೊಂದರೆ ಇರಲಿಲ್ಲ.

2. ದಾವಾ ಆಸ್ತಿಗಳು ನನ್ನ ತಂದೆಯಾದಂತಹ ಅಡಿವೆಪ್ಪನಿಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಗಳಾಗಿರುತ್ತವೆ. ದಾವಾ ಆಸ್ತಿಗಳು ಕರಿಯಪ್ಪ ಹೆಸರಿನಲ್ಲಿ ಇದ್ದ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ದಾವಾ ಆಸ್ತಿಯ ಸರ್ವೆನಂಬರುಗಳನ್ನು ನನಗೆ ಹೇಳಲು ಆಗುವುದಿಲ್ಲ. ಒಟ್ಟು 9 ಎಕರೆ ಚಿಲ್ಲರೆ ಜಮೀನು ನನ್ನ ತಂದೆಯಾದ ಅಡಿವೆಪ್ಪನವರಿಗೆ ಬಂದಿತ್ತು. ಆ ರೀತಿ ಬಂದಂತಹ ಆಸ್ತಿಗಳನ್ನು 1981 ರಲ್ಲಿಯೇ ನಾವು ಹಿಸ್ಸೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ಸಾಕ್ಷಿಗೆ ಡ.ನಂ.1036 ರ ದೃಢೀಕೃತ ನಕಲು ವಾಟ್ನಿ ಪ್ರತಿಯನ್ನು ತೋರಿಸಿ ಅದರಂತೆ ನಾವು ಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ. ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಹಿರೇಕೆರೂರು.